ಆ ಬಗ್ಗೆ ಅವರು ಮೇಲ್ಪಟ್ಟ ಅಧಿಕಾರಿಗಳಿಗೆ ವರದಿ ಮಾಡುತ್ತಾರೆ. ಗ್ರಾಮಪಂಚಾಯಿತಿಗಳ ಸಕ್ರಮ ಆಡಿಟ್‌ಮಾಡುವ ಬಗ್ಗೆ ಸೂಕ್ತಕಾರ್ಯಕ್ರಮ ಕೈಕೊಳ್ಳ ಬೇಕೆಂದು ಸ್ಥಳೀಯ ಸಂಸ್ಥೆಗಳ ಕಮಿಷನರವರಿಗೆ ಸೂಚನೆ ಕೊಡಲಾಗಿದೆ.

ಶ್ರೀ ಟಿ. ಸಿ. ಬನಪ್ಪ.—ಹಾಗೆ ಅವರು ಇಲ್ಲಿಯತನಕ ಏಕೆ ಆಡಿಟ್‌ಮಾಡಲಲ್ಲವೆಂಬ ಬಗ್ಗೆ ಅವರಿಂದ explanation call for ಮಾಡಿದ್ದೀರಾ?

ಶ್ರೀ ಟಿ. ಚನ್ನಯ್ಯ.—ಅವಶ್ಯಕತೆ ಕಂಡುಬಂದರೆ ಮಾಡಲಾಗುತ್ತದೆ.

ಶ್ರೀ ಟಿ. ಸಿ. ಬನಪ್ಪ.—ಹಾಗಾದರೆ ಆ ರೀತಿಯಾಗಿ ಯಾವ ಆಡಿಟ್‌ಗಳನ್ನೂ ಮಾಡದೆ ಕೈಬಿಟ್ಟಿರುವುದು ಒಂದು ಅಪರಾಧವಲ್ಲವೆಂಬುದು ಸರ್ಕಾರದವರ ಅಭಿಪ್ರಾಯವೋ?

ಶ್ರೀ ಟಿ. ಚನ್ನಯ್ಯ.—ಹಾಗಲ್ಲ.

ಶ್ರೀ ಟಿ. ಸಿ. ಬನಪ್ಪ.—ಹಾಗಾದರೆ ರೆವೆನ್ಯೂ ಮ್ಯಾನ್ಯುಯಲ್‌ನಲ್ಲಿ ಹೇಳಿರುವ ಪ್ರಕಾರ ಆಡಿಟ್‌ಮಾಡದಿರುವುದು ಯಾವ ಧರ್ಮ?

ಶ್ರೀ ಟಿ. ಚನ್ನಯ್ಯ.—ಸಾಮಾನ್ಯವಾಗಿ ಡೆಪ್ಯುಟಿ ಕಮಿಷನರುಗಳೇ ಅದಕ್ಕೆಲ್ಲಾ ಒಂದು ತಕ್ಕ ವ್ಯವಸ್ಥೆ ಮಾಡಬೇಕಾಗಿತ್ತು. ಆದರೆ ಈಗ ಯಾವ ಯಾವ ತಾಲ್ಲೂಕುಗಳಲ್ಲಿ ಹಾಗೆ ಲೆಕ್ಕಗಳು ಆಡಿಟ್ ಆಗದೆ ಇರುತ್ತವೆಯೋ ಅಂಥ ನಿದರ್ಶನಗಳನ್ನು ಡೆಪ್ಯುಟಿ ಕಮಿಷನರ ಗಮನಕ್ಕೆ ತಂದು ಅದಕ್ಕೆ ತಕ್ಕ ವ್ಯವಸ್ಥೆ ಗೆಳನ್ನುಮಾಡಿ ಆಡಿಟ್‌ಮಾಡಿಸಬೇಕೆಂದು ಅವರಿಗಲ್ಲಾ ಸರ್ಕಾರದಿಂದ ಸೂಚನೆ ಹೋಗಿದೆ.

ಶ್ರೀ ಟಿ. ಸಿ. ಬನಪ್ಪ.—ಹಾಗೆಯಾವ ಯಾವ ಪಂಚಾಯಿತಿಗಳ ಲೆಕ್ಕ ಆಡಿಟ್ಟಾಗಿರುವುದಿಲ್ಲವೋ ಅಂಥವುಗಳನ್ನು ಡೆಪ್ಯುಟಿಕಮಿಷನರ ನಿಗಕ್ಕೆ ತಂದರೆ, ಅವರು ಅವುಗಳ ಬಗ್ಗೆ ಕೂಡಲೇ ಆಡಿಟ್ ನಡೆಸುವಂತೆ ಏರ್ಪಾಡುಮಾಡಬೇಕೆಂದು ತಾವು ಅವರಿಗೆ ಸರಿಯಾದ ಇನ್ಸ್ಟ್ರಕ್ಷನ್‌ಗಳನ್ನು ಕೊಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಮಾಡುತ್ತೇವೆಂದು ಹೇಳಿದ್ದೇನೆ.

ಶ್ರೀ ಟಿ. ಸಿ. ಬನಪ್ಪ.—ಅತ್ಯಾವಶ್ಯಕವಾದ ರಿಪೋರ್ಟ್‌ನಲ್ಲಿ ನಮೂದಿಸಿರುವ ಪ್ರಕಾರ ಸಂಸ್ಥಾನಾದ್ಯಂತ ಇರತಕ್ಕ 12,610 ಗ್ರಾಮಪಂಚಾಯಿತಿಗಳ ಪೈಕಿ ಕೇವಲ 1,200 ಎಂದರೆ ಶೇಕಡ 10ರಷ್ಟು ಪಂಚಾಯಿತಿಗಳು ಮಾತ್ರ ಆಡಿಟ್‌ಗಾದಂತಾಗಿದೆಯೆಂಬ ಅಂಶ ತಮ್ಮ ಅವಗಾಹನೆಗೆ ಬಂದಿದೆಯೇ?

Sri T. CHANNIAH.—I want notice.

Annual collection of lac by the Forest Department.

Q.—221. Sri N. HUCHMASTHY GOWDA (Huliyurdurga).—

Will the Government be pleased to state :—

(*a*) the annual collection of lac by the Forest Department during the last five years;

(*b*) the actual cost of production per maund inclusive of establishment charges and other initial expenditure;

(*c*) the rate at which it is supplied to the Lac Factory;

(*d*) the number of gazetted and non-gazetted staff that are employed on this work (their salaries and their special qualifications for the posts they hold may kindly be furnished);

(*e*) the divisions in which the lac is propagated, the area and the number of trees operated upon;

(*f*) the profits and loss of the scheme for the last five years?

A.—Sri T. CHANNIAH (Minister for Public Health and Local Self-Government).—

		Mds.	Lbs.
(*a*) 1948-49	...	258	...
1949-50	...	420	12½
1950-51	...	404	27
1951-52	...	535	14
1952-53	...	676	22

(*b*) Rs. 29-6-3 per maund.

(*c*) The rates have varied from time to time. In 1952, the rates were Rs. 30 per maund for Sagade and Bore crude lac and Rs. 20 per maund of Jalari crude lac.

(*d*) *Gazetted Staff*.—One Sub-Assistant Conservator of Forests. Salary of the present incumbent Rs. 190 *plus* Duty Allowance of Rs. 30, Graduate of Mysore University. Trained in the Mysore Forest Rangers School.

Non-Gazetted Staff.—One Ranger. Salary of the present incumbent Rs 90 *plus* Duty Allowance Rs. 15, Graduate of the Mysore University. Trained in the Mysore Forest Rangers School.

Three Foresters.—Pay of present incumbents (*a*) Rs. 67, (*b*) Rs. 51, and (*c*) Rs 35. The first two are trained in the Mysore Foresters School; the third one is a new recruit with no special qualification.

Three Watchers ... Rs. 15 each
Two Orderlies ... Rs. 18 and Rs. 16 respectively

(*e*) Tumkur and Bangalore.

The number of trees varies from season to season. At present, some 2,000 trees are under the crop. The areas are very widely scattered.

(SRI T. CHANNIAH.)

(f) There have been losses as follows :-

	Rs.	a.	p.
1948-49 ...	3,608	0	0
1949-50 ...	11,968	0	0
1950-51 ...	8,226	1	0
1951-52 ...	9,679	11	0
1952-53 ...	12,199	0	6

ಶ್ರೀ ಎ. ಹುಚ್ಚಮಾಸ್ತಿಗೌಡ.—ಕಳೆದ 5 ವರ್ಷಗಳಿಂದಲೂ ಈ ಅರಗನ್ನು ಉತ್ಪತ್ತಿಮಾಡುತ್ತಿರುವ ಬಗ್ಗೆ ಸರ್ಕಾರದವರಿಗೆಷ್ಟು ಹಣ ಉತ್ಪತ್ತಿಯಾಗಿದೆ ಎಂಬುದನ್ನು ಹೇಳಬಲ್ಲರಾ?

Sri T. CHANNIAH.—Notice.

ಶ್ರೀ ಎ. ಹುಚ್ಚಮಾಸ್ತಿಗೌಡ.—(ಬ) ಪ್ರಶ್ನೆಗೆ ಉತ್ತರವಾಗಿ ರೂ. 29-6-3 per maund ಎಂದು ತಿಳಿಸಿದ್ದೀರಿ. ಇದರಲ್ಲಿ ಚೀಫ್‌ರಿಸರ್ಚ್ ಆಫೀಸರ ಟಿ. ಎ. ಕೂಡ ಸೇರಿರುತ್ತದೆಯೇ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಎ. ಹುಚ್ಚಮಾಸ್ತಿಗೌಡ.—ಹಾಗಾಗಾದರೆ ಖರ್ಚು ಉತ್ಪತ್ತಿಗಿಂತಲೂ ಹೆಚ್ಚಾಗಿ ಆಗುತ್ತಿದೆಯೆಂದು ನಾವು ದಾರಾಳವಾಗಿ ಭಾವಿಸಬಹುದಲ್ಲವೇ?

Sri T. CHANNIAH.—I believe so.

ಶ್ರೀ ಎ. ಹುಚ್ಚಮಾಸ್ತಿಗೌಡ.—1952ನೆಯ ಇಸವಿಯಲ್ಲಿ ಒಂದು ಮಣಕ್ಕೆ ಎಷ್ಟು ಖರ್ಚಾಗಿರುತ್ತದೆಯೋ ಅಷ್ಟೇ ಖರ್ಚಿನಲ್ಲಿ ಅದಕ್ಕೆ ಹಿಂದಿನ ವರ್ಷಗಳಲ್ಲಿ ಮಾಡುವುದಕ್ಕೆ ಆಗುತ್ತಿರಲಿಲ್ಲವೇ?

(ಉತ್ತರವಿಲ್ಲ.)

ಶ್ರೀ ಎ. ಹುಚ್ಚಮಾಸ್ತಿಗೌಡ.—ತಾವು 1952ನೆಯ ಇಸವಿಯಲ್ಲಿ ಉತ್ಪತ್ತಿಮಾಡಿರತಕ್ಕ ಅರಗಿನ ಬಗ್ಗೆ ಒಂದು ಮಣಕ್ಕೆ 30ರೂ. ಗಳೆಂದೂ, ಇನ್ನೊಂದು ರೂ. 20 ಎಂದೂ ತಿಳಿಸಿದ್ದೀರಿ. ಇದಕ್ಕಿಂತಲೂ ಕಮ್ಮಿದರದಲ್ಲಿ ಅರಗನ್ನು ಉತ್ಪತ್ತಿಮಾಡುವುದಕ್ಕೆ ಸಾಧ್ಯವಾಗಲಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಪ್ರತಿವರ್ಷವೂ ಮಾರ್ಕೆಟ್ ರೇಟು ಹೆಚ್ಚುಕಡಮೆಯಾಗುತ್ತದೆ. ಇದು ಆಯಾಯ ವರ್ಷದಲ್ಲಿರುವ ಮಾರ್ಕೆಟ್ ರೇಟನ್ನ ಅವಲಂಬಿಸಿರುತ್ತದೆ.

ಶ್ರೀ ಎ. ಹುಚ್ಚಮಾಸ್ತಿಗೌಡ.—ಈ ಅರಗನ್ನು ಉತ್ಪತ್ತಿಮಾಡಲು ಬೇರೆ ಯಾವ ಸಾಮಾನುಗಳನ್ನೂ ಕೊಂಡುತರಬೇಕಾಗಿಲ್ಲವಾದ್ದರಿಂದ, ಈಗ ತಾವು ಇದನ್ನು ತಯಾರಿಸತಕ್ಕ ದರಕ್ಕಿಂತಲೂ ಕಡಮೆದರದಲ್ಲಿ ತಯಾರಿಸುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಎ. ಹುಚ್ಚಮಾಸ್ತಿಗೌಡ.—ಈಗ ತಾವು ಅರಗನ್ನು ಯಾವ ದರದಲ್ಲಿ ಮಾರಾಟಮಾಡುತ್ತಿದ್ದೀರಿ?

ಅಧ್ಯಕ್ಷರು.—ಅದಕ್ಕೆ ಪ್ರಶ್ನೋತ್ತರದಲ್ಲೇ ಉತ್ತರ ಕೊಟ್ಟಿದ್ದಾರೆ.

ಶ್ರೀ ಎ. ಹುಚ್ಚಮಾಸ್ತಿಗೌಡ.—ತಾವು (c) ಗೆ ಉತ್ತರವಾಗಿ, "The rates have varied from time to time" ಎಂದು ತಿಳಿಸಿದ್ದೀರಿ. ಹಾಗಾದರೆ ತಾವು ಉತ್ಪತ್ತಿಮಾಡುವ ಅರಗಿನ ಬೆಲೆಗಿಂತಲೂ ಹೆಚ್ಚಿಗೆ ಧಾರಣೆ ಯಾವಾಗ, ಯಾವ ಮಾರ್ಕೆಟ್ಟಿನಲ್ಲಿ ಮಾರಾಟಮಾಡಲ್ಪಡುತ್ತಿತ್ತೆಂಬುದನ್ನು ಹೇಳಬಲ್ಲರಾ?

Sri T. CHANNIAH.—Sir, I have no information.

ಶ್ರೀ ಎ. ಹುಚ್ಚಮಾಸ್ತಿಗೌಡ.—ಸ್ವಾಮಿ, ನನಗೆ ಗೊತ್ತಿರುವ ವರ್ತಮಾನದ ಪ್ರಕಾರ ಇಲ್ಲಿ ತಾವು ತೋರಿಸಿರುವಷ್ಟು ಉತ್ಪತ್ತಿ ಖರ್ಚು ವ್ಯತ್ಯಾಸವಾಗುತ್ತಿರುವುದರಿಂದ ಮತ್ತು ಇದು ಇತರ ಕಚೆ ಮಣ ಒಂದಕ್ಕೆ 12 ರೂಪಾಯಿಗಳಿಗಿಂತ ಕಡಮೆದರದಲ್ಲಿ ಮಾರಾಟವಾಗುತ್ತಿರುವಾಗ ಈ ಕೈಗಾರಿಕೆಯನ್ನು ಕೈಬಿಡುವುದು ನೂಕ್ತವಲ್ಲವೇ?

ಶ್ರೀ ಟಿ. ಚನ್ನಯ್ಯ.—ಹಾಗೆ ಇದನ್ನು ಕೈಬಿಡುವುದಕ್ಕಾಗುವುದಿಲ್ಲ. This is one of the important Cottage Industries in Mysore State and lac has to be supplied to Mysore Paint and Lac Works. There is some loss, but just to provide labour and work for the raiyats this industry is being encouraged.

ಶ್ರೀ ಎ. ಹುಚ್ಚಮಾಸ್ತಿಗೌಡ.—ಈಗ ನಾವು ತೀರ ಕಡಮೆದರದಲ್ಲಿ ಉತ್ಪತ್ತಿಮಾಡುತ್ತಿದ್ದೇವೆಂದು ಭಾವಿಸಿದ್ದರೂ, ಇದಕ್ಕಿಂತಲೂ ಕಡಮೆದರದಲ್ಲಿ ಎಂದರೆ ಅರ್ಧದರಧಲ್ಲಿ ಬೇರೆ ಕಡೆ ಈ ಮಾಲು ಸಿಕ್ಕುತ್ತಿರುವಾಗ, ಇದರ ಬಗ್ಗೆ ತಾವು ಎಷ್ಟು ಜನಗಳಿಗೆ ಈ ಮೂಲಕ ಒಂದು ಕೂಲಿ ಕೆಲಸವನ್ನು ಒದಗಿಸಲು ಸಾಧ್ಯವಿದೆ ಎಂಬುದನ್ನು ತಿಳಿಸುವಿರಾ?

Sri T. CHANNIAH.—At least a few raiyats will find employment and to that extent, the unemployment problem will be solved.

ಶ್ರೀ ಎ. ಹುಚ್ಚಮಾಸ್ತಿಗೌಡ.—ಇದರ ಉತ್ಪತ್ತಿಯಲ್ಲಿ ಎಷ್ಟು ಭಾಗವನ್ನು ಸಿಬ್ಬಂದಿಯ ವೆಚ್ಚಕ್ಕಾಗಿ ಖರ್ಚುಮಾಡಲಾಗುತ್ತಿದೆಯೆಂಬುದನ್ನು ಹೇಳುವುದಕ್ಕಾಗುತ್ತದೆಯೇ?

Sri T. CHANNIAH.—Notice.

ಶ್ರೀ ಎ. ಹುಚ್ಚಮಾಸ್ತಿಗೌಡ.—ಈ ಸಿಬ್ಬಂದಿ ವೆಚ್ಚವನ್ನು ತಗ್ಗಿಸುವುದರ ಬಗ್ಗೆ ತಾವು ಏನಾದರೂ ಯೋಚನೆಮಾಡಿದ್ದೀರಾ?

Sri T. CHANNIAH.—We have not thought of it yet. I will examine if any retrenchment in the present staff is possible and whether the concerned District Forest Officers could be entrusted with this work of lac production.

ಶ್ರೀ ಎ. ಹುಚ್ಚಮಾಸ್ತಿಗೌಡ.—ಹಾಗಿದ್ದಪಕ್ಷದಲ್ಲಿ ಇದನ್ನು ಇನ್ನು ಮುಂದಕ್ಕೆ ಆಯಾಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ ಸಿಬ್ಬಂದಿಗೇ ವಹಿಸಲು ಆಲೋಚನೆಮಾಡುತ್ತೀರಾ?

Sri T. CHANNIAH.—I will examine the suggestion.

ಶ್ರೀ ಬಿ. ಸಿ. ನಂಜುಂಡಯ್ಯ.—ಹೀಗೆ ಸರ್ಕಾರದವರು ಈ ಉದ್ಯಮವನ್ನು ಕೈಕೊಳ್ಳುವುದಕ್ಕೆ ಮೊದಲು ಇದನ್ನು ಯಾರಾದರೂ ಖಾಸಗಿ ಜನರು ಕೈಕೊಂಡಿದ್ದರೇ?

Sri T. CHANNIAH.—Notice.

ಶ್ರೀ ಬಿ. ಸಿ. ನಂಜುಂಡಯ್ಯ.—ಈ ಹಿಂದೆ ಈ ಉದ್ಯೋಗವನ್ನು ಫಾರೆಸ್ಟ್ ಇಲಾಖೆಯವರು ಖಾಸಗಿ

ಜನರಿಗೆ ಕಾಂಟ್ರಾಕ್ಟ್ ಕೊಟ್ಟಿದ್ದರೆಂಬ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.— ಗೊತ್ತಿಲ್ಲ.

ಶ್ರೀ ಬಿ. ಸಿ. ನಂಜುಂಡಯ್ಯ.—ಸರ್ಕಾರಕ್ಕೆ ಇದರಿಂದ ನಷ್ಟವಾಗುತ್ತಿದ್ದರೂ ಇದನ್ನೊಂದು ಕಾಜೇಜ್ ಇಂಡಸ್ಟ್ರಿಯನ್ನಾಗಿ ಕೈಕೊಳ್ಳಲಾಗಿರುತ್ತೆಂದು ಹೇಳಿದಿರಿ. ಆದರೆ ಇನ್ನು ದೇಶದಲ್ಲಿ ಇದಕ್ಕಿಂತಲೂ ಹೆಚ್ಚಿನ ಉತ್ಪೇಜನಪಡೆಯಲು ಅರ್ಹತೆ ಇರುವಂಥ ಇಂಡಸ್ಟ್ರಿಗಳಾವುವೂ ಇರುವುದಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಬಿ. ಸಿ. ನಂಜುಂಡಯ್ಯ.—ಈಗ ತಾವು ಈ ಉದ್ಯಮವನ್ನು ಕೈಕೊಳ್ಳುವ ಬದಲು ಇದನ್ನು ಖಾಸಗಿಯವರಿಗೆ ಒಪ್ಪಿಸಿದರೆ ಆಗ ಈ ಇಂಡಸ್ಟ್ರಿ ಇನ್ನೂ ಹೆಚ್ಚಿನ ಅಭಿವೃದ್ಧಿಗೆ ಬರಬಹುದಲ್ಲವೇ ?

ಶ್ರೀ ಟಿ. ಚನ್ನಯ್ಯ.—ಆ ವಿಚಾರ ಕೂಡ ನಮ್ಮ ಗಮನದಲ್ಲಿದೆ. ಅದೆಲ್ಲವನ್ನೂ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈಗ ತಾವು ಈ ಅರಗನ್ನು ತಯಾರಿಸುವ ಮರಗಳು 2,000 ಮಾತ್ರ ಇರುತ್ತವೆಂದು ತಿಳಿಸಿದ್ದೀರಿ. ಈ ಮರಗಳನ್ನು ಬೇರೆಯವರಿಗೆ ಕೊಟ್ಟು, ಅದರಿಂದ ಬರುವ ರಾಯಲ್ಟಿಯನ್ನು ಪಡೆದುಕೊಂಡರೆ ಈ ಕೈಗಾರಿಕೆಗಿಂತಲೂ ಹೆಚ್ಚಿನ ಫಾಯಿದೆ ಬರುತ್ತೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

Sri T. CHANNIAH.—All these aspects will be examined.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈಗ ಅರಗಿನ ಬೆಳೆಯನ್ನು ಹೆಚ್ಚಿನತಕ್ಕ ಬಗ್ಗೆ ಯಾವುದಾದರೂ ಇಲಾಖೆ ಇದೆಯೇ ?

ಶ್ರೀ ಟಿ. ಚನ್ನಯ್ಯ.—ಮೈಸೂರಲ್ಲರುವ Paint and Lac Works ಕಂಪೆನಿಗೆ ಫಾರೆಸ್ಟ್ ಇಲಾಖೆಯ ಮೂಲಕ ಈಗ ಈ ಅರಗನ್ನು ಸರಬರಾಯಿ ಮಾಡಲಾಗುತ್ತಿದೆ. ಆದರೆ ಹಳ್ಳಿ ಜನರಿಗೆ ಕೂಲಿಯನ್ನೊದಗಿಸುವ ಉದ್ದೇಶದಿಂದ ನಾವೀಗ ಈ ಕೈಗಾರಿಕೆಗೆ ಉತ್ಪೇಜನಕೊಡುತ್ತಿದ್ದೇವೆ.

ಶ್ರೀ ಎಸ್. ಸಿದ್ದಪ್ಪ.—ಹಿಂದೆ ಮಾಡುತ್ತಿದ್ದಾಗ ಬರುತ್ತಿದ್ದ ಮೊಬಲಗಿನಷ್ಟು ಈಗ ಬರುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಈಗ ದರಗಳು ಕಮ್ಮಿಯಾಗಿವೆ. ಮಾರ್ಕೆಟ್ಟಿನಲ್ಲಿ depression ಇರುವುದರಿಂದ ಹೆಚ್ಚಿಗೆ ದರಗಳು ಸಿಕ್ಕುತ್ತಿಲ್ಲ. ಆದ್ದರಿಂದ ನಷ್ಟವಾಗುತ್ತಿದೆ.

ಶ್ರೀ ಡಿ. ದೇವರಾಜ್ ಅರಸ್.—ಈಗ ಹಾಲಿಯಿರುವ ಮಾರ್ಕೆಟ್ ದರಗಳೇನು ?

ಶ್ರೀ ಟಿ. ಚನ್ನಯ್ಯ.—ಉತ್ತರದಲ್ಲೇ ಕೊಟ್ಟಿದೆ.

ಶ್ರೀ ಡಿ. ದೇವರಾಜ್ ಅರಸ್.—1952ನೆಯ ಇಸವಿಯಲ್ಲಿ 'the Rates were Rs. 30 per maund for Sagade and Bore crude lac and Rs. 20 for Jalari crude lac' ಎಂದು ಹೇಳಿದೆ. What is the rate during this year ? Because it varies from year to year. That is what is stated.

(ಉತ್ತರವಿಲ್ಲ).

Restoration of Gunjiganur tank in Holalkere Taluk.

Q.—120. Sri G. DUGGAPPA (Holalkere—Scheduled Castes).—

Will the Government be pleased to state :—

(*a*) whether an estimate for the restoration of Gunjiganur tank in Holalkere Taluk was prepared ;

(*b*) whether the same has been submitted to Government for sanction ;

(*c*) whether it is a fact that the villagers are urging for the restoration of this tank since 1946 ?

A.— Sri KADIDAL MANJAPPA (Minister for Revenue and Public Works).—

(*a*) Yes.

(*b*) Not yet.

(*c*) Yes, there have been representations.

ಶ್ರೀ ಜಿ. ದುಗ್ಗಪ್ಪ.—ಅಂದಾಜು ತಯಾರಿಸಲ್ಪಟ್ಟಿದೆಯೆಂದು ಹೇಳಿದ್ದೀರಿ. ಅಂದಾಜು ಆಗಿ ಎಷ್ಟು ದಿವಸವಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.— Recently ಎಂದು ಹೇಳಬಹುದು.

ಶ್ರೀ ಜಿ. ದುಗ್ಗಪ್ಪ.—ಎಷ್ಟು ರೂಪಾಯಿಗಳಿಗೆ ಅಂದಾಜು ಆಗಿದೆ?

ಶ್ರೀ ಕಡಿದಾಳ್ ಮಂಜಪ್ಪ.—24,000 ರೂಪಾಯಿಗಳಿಗೆ.

ಶ್ರೀ ಜಿ. ದುಗ್ಗಪ್ಪ.—1946ನೆಯ ಇಸವಿಯಿಂದ ಮನವಿಗಳು ಬರುತ್ತಿವೆಯೆಂದು ಹೇಳಿದ್ದೀರಿ. ಅಂದಾಜು ತಯಾರುಮಾಡಬೇಕಾದರೆ ಇಷ್ಟು ವರ್ಷಗಳು ಬೇಕಾಯಿತೇ ?

ಶ್ರೀ ಕಡಿದಾಳ್ ಮಂಜಪ್ಪ.—ಮನವಿ ಬಂದಕೂಡಲೆ ತಯಾರುಮಾಡುವುದಕ್ಕಾಗುವುದಿಲ್ಲ. ಸಾಧಕಬಾಧಕಗಳನ್ನು ನೋಡಿ ಪುರುಮಾಡಬೇಕಾಗುತ್ತದೆ.

ಶ್ರೀ ಜಿ. ದುಗ್ಗಪ್ಪ. ಸರ್ಕಾರಕ್ಕಿನ್ನೂ ಈ ಅಂದಾಜು ಬಂದಿಲ್ಲವೇ ?

Mr. SPEAKER.—There is the answer for (*b*) : 'Not yet.'

ಶ್ರೀ ಜಿ. ದುಗ್ಗಪ್ಪ.—ಆದಷ್ಟು ಜಾಗ್ರತೆಮಾಡಿ ಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇರಿಗೇಷನ್ ಆಕ್ಟ್ ಪ್ರಕಾರ enquiry ಗೆ ಹೋಗಿದೆ. ಅಲ್ಲಿಂದ ಬಂದಮೇಲೆ ಕೂಡಲೆ ಪರಿಶೀಲನೆಮಾಡುತ್ತೇವೆ.

Repairs to Anecut across Vatehalla flowing near Channapurada Thimmanahalli.

Q.—175. Sri H. K. SIDDAIYA (Belur—Scheduled Castes).—

Will the Government be pleased to state :—

(*a*) whether it has come to their notice that the anecut across the